File No. UDD/91/GEL/2020-MA-2-Urban Development Department (Computer No. 343973)

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	22(163)
ಸದಸ್ಯರ ಹೆಸರು	ಶ್ರೀ. ಸುನೀಲ್ ಸುಬ್ರಮಣಿ .ಎಂ.ಪಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	22.09.2020
ಉತ್ತರಿಸುವವರು	ಮಾನ್ಯ ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಮಡಿಕೇರಿ ನಗರದಲ್ಲಿ ನಗರಸಭೆ ವತಿಯಿಂದ ಮನೆ-ಮನೆಗಳಿಂದ ಕಸವನ್ನು ಸಂಗ್ರಹಿಸಲಾಗುತ್ತಿದೆಯೇ?	ಹೌದು, ಮಡಿಕೇರಿ ನಗರಸಭೆ ವ್ಯಾಪ್ತಿಯಲ್ಲಿ 8969 ಮನೆಗಳಿದ್ದು, ಘನ ತ್ಯಾಜ್ಯವನ್ನು 6 ಆಟೋ ಟಿಪ್ಪರ್ ಹಾಗೂ 5 ಟ್ರ್ಯಾಕ್ಟರ್‌ಗಳ ಮೂಲಕ ಸಂಗ್ರಹಿಸಲಾಗುತ್ತಿದೆ.
ಆ	ಸಂಗ್ರಹಿಸಿದ ಈ ಕಸವನ್ನು ನಗರ ಸಭೆಯು ಯಾವ ಸ್ಥಳದಲ್ಲಿ ಯಾವ ರೀತಿಯಲ್ಲಿ ವಿಲೇವಾರಿ ಮಾಡುತ್ತಿದೆ? (ವಿವರ ನೀಡುವುದು)	ನಗರ ವ್ಯಾಪ್ತಿಯಲ್ಲಿ ಪ್ರತಿದಿನ 20 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದ್ದು, ಸುಮಾರು 18 ಟನ್ ತ್ಯಾಜ್ಯವನ್ನು ಸಂಗ್ರಹಿಸಲಾಗುತ್ತಿದೆ. ಕರ್ಣಂಗೇರಿ ಗ್ರಾಮದ ಸರ್ವೆ ನಂ 471/1 P16 ರಲ್ಲಿ 6 ಎಕರೆ ಜಾಗದಲ್ಲಿ, 9 ಟನ್ ಹಸಿ ತ್ಯಾಜ್ಯವನ್ನು ಕಂಪೋಸ್ಟ್ ಪಿಟ್‌ಗಳಲ್ಲಿ ಸಂಸ್ಕರಿಸಿ, ಟ್ರಾಮೆಲ್ ಸ್ಕ್ರೀನ್ ಮೂಲಕ ಬೇರ್ಪಡಿಸಿ ನಂತರ ಗೊಬ್ಬರವನ್ನು ನಗರಸಭೆ ಉದ್ಯಾನವನ ಹಾಗೂ ಸುತ್ತಮುತ್ತಲಿನ ಎಸ್ಟೇಟ್ ಗಳಿಗೆ ನೀಡಲಾಗುತ್ತಿದೆ. ಅಂದಾಜು 10-11 ಟನ್ ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿರಿಸಿ, ಭಾಗಶ: ಪ್ಲಾಸ್ಟಿಕ್ ತ್ಯಾಜ್ಯವನ್ನು ಸಣ್ಣ ಪ್ರಮಾಣದಲ್ಲಿ ಬೇಲಿಂಗ್ ಯಂತ್ರದ ಮೂಲಕ ಬೇಲ್ ಮಾಡಿ ಸಂಸ್ಕರಣೆ ಘಟಕದಲ್ಲಿ ಸಂಗ್ರಹಿಸಲಾಗಿರುತ್ತದೆ. ಉಳಿಕೆ ತ್ಯಾಜ್ಯವನ್ನು ತೆರೆದ ಪ್ರದೇಶದಲ್ಲಿ ವಿಲೇಮಾಡಲಾಗುತ್ತಿದೆ.
ಇ	ಕಸ ವಿಲೇ ಮಾಡುವ ಮೊದಲು ಕಸ ಬೇರ್ಪಡಿಸಲಾಗುತ್ತಿದೆಯೇ? (ವಿವರ ನೀಡುವುದು)	ನಗರಸಭೆಯ 23 ವಾರ್ಡ್‌ಗಳಲ್ಲಿ 17 ವಾರ್ಡ್‌ಗಳಿಂದ ಮೂಲದಲ್ಲಿಯೇ ಕಸವನ್ನು ಬೇರ್ಪಡಿಸಿ ನೀಡಲಾಗುತ್ತಿದೆ. ಇನ್ನುಳಿದ 6 ವಾರ್ಡ್ ಗಳಲ್ಲಿ ಸಾರ್ವಜನಿಕರಿಗೆ ಕಸವನ್ನು ಬೇರ್ಪಡಿಸಿ ನೀಡುವಂತೆ ಸೂಚಿಸಲಾಗಿರುತ್ತದೆ ಹಾಗು ಈ ಬಗ್ಗೆ NGO ಗಳ ಮೂಲಕ ಐ.ಇ.ಸಿ ಚಟುವಟಿಕೆಗಳನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ.
ಈ	ಕಸ ವಿಲೇವಾರಿಯಿಂದ ಸುತ್ತಲಿನ ಪ್ರದೇಶದಲ್ಲಿ ನೈರ್ಮಲ್ಯವನ್ನು ಯಾವ ರೀತಿಯಲ್ಲಿ	ಸಂಸ್ಕರಣೆ ಘಟಕದ ಸುತ್ತಲೂ Compound wall ನಿರ್ಮಿಸಿದ್ದು, ಮರಗಿಡಗಳನ್ನು ಬೆಳೆಸಲಾಗಿರುತ್ತದೆ ಹಾಗು ಯಾವುದೇ ರೀತಿಯ ಕ್ರಿಮಿ ಕೀಟಗಳು ಉತ್ಪತ್ತಿಯಾಗದಂತೆ ಕೀಟನಾಶಕ ಸಿಂಪಡಿಸಿ ಎಚ್ಚರಿಕೆ ವಹಿಸಲಾಗುತ್ತಿದೆ.

ಕಾಪಾಡಲಾಗುತ್ತಿದೆ?	ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಣೆ ಮಾಡಿ, ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆ ಉಂಟಾಗದಂತೆ ಕ್ರಮವಹಿಸಲಾಗುತ್ತಿದೆ. ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಅಧಿಕಾರಿಗಳ ತಂಡವನ್ನು ತ್ಯಾಜ್ಯ ನಿರ್ವಹಣಾ ಘಟಕದ ತಪಾಸಣೆಗೆ ನಿಯೋಜಿಸಲಾಗಿ, ಸದರಿ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ಅಂದಾಜು 30,000-40,000 ಟನ್ ಗಳಷ್ಟು ಹಳೆಯ (Legacy) ತ್ಯಾಜ್ಯವು ಶೇಖರಣೆಯಾಗಿದ್ದು, ಸದರಿ ತ್ಯಾಜ್ಯವನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನದಂಡಗಳ ಅನುಸಾರ ಹೊರತೆಗೆದು ಬಯೋರೆಮಿಡಿಯೇಷನ್ ಪದ್ಧತಿಯ ಮೂಲಕ ಸಂಸ್ಕರಿಸಿ ವಿಲೇ ಮಾಡಬೇಕಿರುತ್ತದೆ ಎಂದು ಅಭಿಪ್ರಾಯಿಸಲಾಗಿದೆ. ಲೆಗಸಿ ತ್ಯಾಜ್ಯ ನಿರ್ವಹಣೆಗಾಗಿ ವಿಸ್ತೃತ ಯೋಜನಾವರದಿಯನ್ನು ಸಿದ್ಧಪಡಿಸಲು ಸೂಕ್ತ ಏಜೆನ್ಸಿಯನ್ನು ನಿಯಮಾನುಸಾರ ಆಯ್ಕೆ ಮಾಡಿ ಸದರಿಯವರ ಶಿಫಾರಸ್ಸಿನಂತೆ ಅಲ್ಪಾವಧಿ ಹಾಗು ದೀರ್ಘಾವಧಿ ಕ್ರಮಗಳನ್ನು ಅನುಷ್ಠಾನಗೊಳಿಸಲು ಉದ್ದೇಶಿಸಿರುತ್ತದೆ. ಈಗಾಗಲೇ ಸಂಗ್ರಹವಾಗಿರುವ ಒಣ ತ್ಯಾಜ್ಯವನ್ನು ಏಕ ಸಮಯದ ಪರಿಹಾರ ಭಾಗವಾಗಿ (one time remediation) ನಿರ್ವಹಿಸಲು ಅಗತ್ಯ ಕ್ರಮವಹಿಸಲಾಗುವುದು. ನಗರಸಭೆಯು ನಗರವ್ಯಾಪ್ತಿಯಲ್ಲಿ ಉತ್ಪಾದನೆಯಾಗುವ ಎಲ್ಲಾ ತ್ಯಾಜ್ಯವನ್ನು ಕೇಂದ್ರೀಕೃತ ಘಟಕಕ್ಕೆ ಸಾಗಿಸುವ ಬದಲಾಗಿ ನಗರದಲ್ಲಿಯೇ ವಿಕೇಂದ್ರೀಕೃತ ತ್ಯಾಜ್ಯ ಸಂಸ್ಕರಣಾ ಘಟಕ/ ಒಣ ತ್ಯಾಜ್ಯ ಸಂಗ್ರಹಣಾ ಘಟಕಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುವುದು. ಸ್ವಚ್ಛ ಭಾರತ ಮಿಷನ್‌ನ ಅಡಿಯಲ್ಲಿ ನಗರಸಭೆಗೆ ಬಿಡುಗಡೆಯಾಗಿರುವ ಮೊತ್ತದಿಂದ ಸ್ಯಾನಿಟರಿ ಲ್ಯಾಂಡ್‌ಫಿಲ್ ಸೌಲಭ್ಯ ಹಾಗು ಇತರ ಅಗತ್ಯ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ಕ್ರಮವಹಿಸಲಾಗುವುದು.

ಕಡತ ಸಂಖ್ಯೆ: ನಅಇ 91 ಜಿಇಎಲ್ 2020

(ಡಾ|| ನಾರಾಯಣಗೌಡ)
ಡಾ. ನಾರಾಯಣ ಗೌಡ
ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು